

ಎಡದಿಂದ ಬಲಕ್ಕೆ:

1. ಅನ್ಯರಿಂದ ದಯೆ ನಿರೀಕ್ಷಿಸಿದರೆ ಇಂಥ ಅಗೌರವ ನಿಶ್ಚಿತ 4
3. ಪಶ್ಚಿಮ ವಾಹಿನಿಯನ್ನು ನೋಡಹೋದದ್ದು ಪಕ್ಷದ ಐದನೆಯ ದಿನ ತಾನೇ? 3
4. ಸಮಾನತೆಯನ್ನು ಒಪ್ಪುವವರ ಸಂಖ್ಯೆ ಅಪಾರ ಏನಿಲ್ಲ 3
6. ಎಷ್ಟೇ ಹಳತಾದರೂ ಜಗ್ಗದಂಥ ಅಡಿಪಾಯ 4
7. ಕೀರ್ತನಕಾರನಾಗಿ ಬಂದಿದ್ದಾನೆ ನೋಡಿ ಬೇಟೆಗಾರ ಮನುಷ್ಯ 4
9. ಕಾವ್ಯವಾಚನಕ್ಕೆಂದು ಎದ್ದು ನಿಂತೊಡನೆ ತಬ್ಬಿಬ್ಬು! 4
11. ಪಡಿತರದ ಚೀಟಿಯಲ್ಲಿ ತಪ್ಪನ್ನು ಸರಿಪಡಿಸಿದ್ದು ಹೇಗೆ? 4
13. ಮಳೆ ಬಂದಿದ್ದರ ಕಾರಣ ಈ ಸುವಾಸನೆ 4
15. ಉಪವಾಸವಿದ್ದು ಮಾಡಿದ ಕೈಂಕರ್ಯದ ಪರಿಣಾಮ 4
17. ಪ್ರಯತ್ನ ವಿಫಲವಾದೊಡನೆ ಆರಂಭವಾಯಿತು ಯುದ್ಧ 3
18. ಓಲಗದೊಡನೆಯೇ ಬಂದ ನೋಡಿ, ಆಕೆಯ ಗಂಡ 3
19. ಬೆಳ್ಳಗಿರುವುದಿಲ್ಲ ಬಿಡಿ, ಕದ್ದು ಗಳಿಸಿದ ದುಡ್ಡು 4

ಮೇಲಿಂದ ಕೆಳಕ್ಕೆ:

1. ಆಮಂತ್ರಿಸುವ ಆನಂದಕ್ಕೆ ಪಾರವೇ ಇಲ್ಲ 3
2. ದೇವರ ಸೇವೆಗೆಂದು ಸಲ್ಲಿಸಿದ ಹಣದ ದಾಖಲೆ ಎಲ್ಲಿ? 3
3. ಪುಡಿ ರೌಡಿಯಂತೆ ವರ್ತಿಸುತ್ತಿದ್ದಾನೆ ಆ ವಿದ್ವಾಂಸ! 3
5. ವೇತನಕ್ಕೆ ಕಾಯುವಲ್ಲಿ ಇಷ್ಟೊಂದು ಆತುರವೇ? 3
7. ಸೀತಾಪತಿಯನ್ನು ಕಿತ್ತುಹಾಕಿದ್ದರಲ್ಲಿ ಬೇರೆ ಯಾರದ್ದೋ ಕಾರಬಾರ 4
8. ಶಿಲೆಯಲ್ಲೇ ಕೊರೆದ ಅಂಗಡಿಯಲ್ಲಿ ಯಾವುದು ಈ ಹಣ್ಣು? 4
9. ಪಕ್ಷಪಾತ ತೋರಿದ ಮೌಲ್ಯಮಾಪಕ ತಲೆಕೆಳಕಾದ 4
10. ವೇಳೆ ಕಳೆವುದು ಕಷ್ಟವಾದೀತೆಂದು ಆಕೆಗೆ ಚಿಂತೆ 4
12. ಪೇಲವ ವರ್ಣದ್ದಾದರೂ ಸುಂದರವಾದ ಚಿಗುರು 3
14. ರೋಷ ಬಂದವರನ್ನು ಸುಮ್ಮನಾಗಿಸಿದ್ದು ಇದೇ ಸಂಗೀತ ಸ್ವರ 3
15. ಸಾಯುವ ತನಕವೂ ಆತ ಜವಾನನೇ ಆಗಿದ್ದ 3
16. ಆ ಪ್ರದೇಶದ ವೈಲಕ್ಷಣ್ಯಕ್ಕೆ ಕಾರಣ ಬರೀ ಉಪ್ಪು 3

### 25-7-2019 ಉತ್ತರಗಳು

ಎಡದಿಂದ ಬಲಕ್ಕೆ:

1.ಅಯೋಮಯ 3. ಶರಧಿ 4. ಮನ್ನಿಸು 6. ಕಲಾತ್ಮಕ 7. ಕರಾವಳಿ 8. ಹೊಸವಿಧ 10. ಋಣಮುಕ್ತ 12. ಅನುನಯ 14. ಹರಿಹರ 16. ಸುಮ್ಮಾನ 17. ಹಮಾಲ 18. ನವಬಣ

ಮೇಲಿಂದ ಕೆಳಕ್ಕೆ:

1. ಅಧಿಕ 2. ಯಮಕ 3. ಶರಾವತಿ 5. ಸುಹಾಸ 7. ಕಲ್ಪತರು 9. ಧರ್ಮರಾಯ 11. ಮುನಿಸು 13. ಅನುಕೂಲ14. ಹನನ 15. ರಹಣ

ಪ್ರಶ್ನಾಂಕಣ

## ಮ್ಯಾಂಡ್ರಿಲ್: ಏನೇನು ದಾಖಲೆ?

ಮ್ಯಾಂಡ್ರಿಲ್. ಅದೊಂದು ಬಗೆಯ ಮಂಗ. ವಿಧ ವಿಧ ರೂಪಗಳಲ್ಲಿರುವ ಮಂಗಗಳಲ್ಲಿ (ಚಿತ್ರ 1,3) ಮ್ಯಾಂಡ್ರಿಲ್‌ನದೇ ಒಂದು ತುಂಬ ವಿಭಿನ್ನ ಸ್ವರೂಪ (ಚಿತ್ರ 2) ವಿಶೇಷವಾಗಿ ಮುಖದಲ್ಲಿ ಮೂಗಿನ ತುದಿಯಿಂದ ಕಣ್ಣುಗಳವರೆಗೆ ದಪ್ಪನಾಗಿ ಎದ್ದು ಕಾಣುವ ಎರಡು ನೀಲಿ ಮಿಶ್ರಿತ ಬಿಳಿ ಮತ್ತು ಅವುಗಳ ನಡುವೆ ಒಂದು ಗಾಢ ಕೆಂಪು ವರ್ಣಗಳ ಪಟ್ಟೆಗಳು! ಈ ವರ್ಣಮಯ, ಆಕರ್ಷಕ ಚಿತ್ತಾರದಿಂದಾಗಿ ಮ್ಯಾಂಡ್ರಿಲ್ ಕನ್ನಡ ಭಾಷೆಯಲ್ಲಿ 'ಮೂರು ನಾಮದ ಕೋತಿ' ಎಂದೇ ಪ್ರಸಿದ್ಧ. ಈ ಮಂಗ ಮಧ್ಯ ಆಫ್ರಿಕಾದ ಐದು ರಾಷ್ಟ್ರಗಳಲ್ಲಿ ಮಾತ್ರ (ಕ್ಯಾಮರೂನ್, ಗಬಾನ್, ನ್ಯೂಗಿನಿ, ಕಾಂಗೋ ಮತ್ತು ನೈಜೀರಿಯಾ) ನೈಸರ್ಗಿಕ ನೆಲೆ ಹೊಂದಿದೆ. ವೃಷ್ಟಿವನ, ಹುಲ್ಲು ಬಯಲು, ನದೀ ತೀರ, ಕೃಷಿ ಭೂಮಿ ಇತ್ಯಾದಿ ಎಲ್ಲ ಪ್ರದೇಶಗಳಲ್ಲೂ ಬದುಕಬಲ್ಲ ಮ್ಯಾಂಡ್ರಿಲ್ ಮಿಶ್ರಾಹಾರಿಯಾಗಿದೆ. ಎಲೆ, ಹೂವು, ಕಾಯಿ, ಹಣ್ಣು, ತೊಗಟೆ, ನಾರು, ಬೇರು... ಜೊತೆಗೆ ಹಕ್ಕಿ, ಆಮೆ, ಕಪ್ಪೆ, ಚೇಳು, ಮಿಡತೆ, ಇರುವೆ, ಗೆದ್ದಲು, ಶಂಬುಕ... ಇತ್ಯಾದಿ ವೈವಿಧ್ಯಮಯ ಆಹಾರಕ್ಕೆ ಹೊಂದಿಕೊಂಡಿದೆ. 25 ರಿಂದ 30 ವರ್ಷಗಳ ಆಯುಷ್ಯವನ್ನು ಪಡೆದಿದೆ. ಮಂಗ ಸಾಮ್ರಾಜ್ಯದಲ್ಲಿ ಮ್ಯಾಂಡ್ರಿಲ್ ಅದ್ಭುತದ ತ್ರಿವಿಧ ವಿಶ್ವ ದಾಖಲೆಗಳನ್ನು ಹೊಂದಿದೆ.

ಧರೆಯಲ್ಲಿರುವ 260 ಪ್ರಭೇದಗಳ ಸಕಲ ಮಂಗಗಳಲ್ಲೂ ಮ್ಯಾಂಡ್ರಿಲ್‌ಗಳದೇ ಗರಿಷ್ಠ ಗಾತ್ರ ತೂಕಗಳ ದಾಖಲೆ. ಈ ಮಂಗಗಳ ವಯಸ್ಕ ಗಂಡುಗಳ ಸಾಮಾನ್ಯ ತೂಕ 32 ಕಿಲೋ ಗ್ರಾಂ, ಎತ್ತರ 3 ಅಡಿ! 54 ಕಿಲೋ ತೂಕದ ದೈತ್ಯ ಗಂಡುಗಳೂ ಅಪರೂಪವಾಗಿ ಪತ್ತೆಯಾಗಿವೆ. ವಯಸ್ಕ ಹೆಣ್ಣುಗಳದು 2 ಅಡಿ ಎತ್ತರ, 16 ಕಿಲೋ ತೂಕ. ದೃಢವಾದ ದಷ್ಟಪುಷ್ಟ ಶರೀರ, ದಪ್ಪನ್ನ ಕೈಕಾಲುಗಳು, ಹಿಂಗಾಲುಗಳದು ಮುಂಗಾಲುಗಳಿಗಿಂತ ಕೊಂಚ ಅಧಿಕ ಉದ್ದ. ಈ ಲಕ್ಷಣಗಳಿಂದ ಮ್ಯಾಂಡ್ರಿಲ್‌ಗಳು ಬಹುಮಟ್ಟಿಗೆ 'ವಾನರ'ರನ್ನೇ ಹೋಲುತ್ತವೆ.




ಮಂಗಗಳಲ್ಲೆಲ್ಲ ಮ್ಯಾಂಡ್ರಿಲ್‌ನದೇ ಅತ್ಯಂತ ವರ್ಣಮಯ ಶರೀರ. ಮುಖದ ಮೇಲಿನ ನೀಲಿ ಮತ್ತು ಕೆಂಪಿನ ಮೂರು ನಾಮಗಳೇ ಅಲ್ಲದೆ ಗಡ್ಡ, ಕಿವಿಗಳ ಅಂಚುಗಳು ಮತ್ತು ಪೃಷ್ಠಗಳು ಕೂಡ ಉಜ್ವಲ ವರ್ಣಗಳಿಂದ ಕಂಗೊಳಿಸುತ್ತವೆ! ಮ್ಯಾಂಡ್ರಿಲ್‌ನ ಬಣ್ಣಗಳಿಗೆ 'ವರ್ಣಮಯ ಕೂದಲುಗಳು' ಕಾರಣ ಅಲ್ಲ. ಆ ಪ್ರದೇಶಗಳಲ್ಲಿ ದಟ್ಟೈಸಿರುವ 'ಕೊಲಾಜನ್'ನ ಎಳೆಗಳ ಮೂಲಕ ಬೆಳಕು ವಕ್ರೀಭವನಗೊಳ್ಳುತ್ತದೆ. ತತ್ಪರಿಣಾಮವಾಗಿ ಈ ವರ್ಣಗಳು ಮೂಡುತ್ತವೆ.

ಎಲ್ಲ ಮಂಗಗಳಂತೆಯೇ ಮ್ಯಾಂಡ್ರಿಲ್‌ಗಳೂ ಗುಂಪು ಜೀವನ ನಡೆಸುತ್ತವೆ. ಆದರೆ ದಾಖಲೆ ಏನೆಂದರೆ, ಈ ಮಂಗಗಳ ಪ್ರತಿ ಗುಂಪಿನಲ್ಲೂ 600ರಿಂದ 800 ಸದಸ್ಯರು ತುಂಬ ಸಾಮಾನ್ಯ! ಕೆಲ ಗುಂಪುಗಳ 'ಜನಸಂಖ್ಯೆ' 1300 ಅನ್ನೂ ಮುಟ್ಟಬಹುದು. ಇಷ್ಟು ಭಾರೀ ಸಂಖ್ಯೆಯಲ್ಲಿ ಬೇರಾವ ಮಂಗ ಪ್ರಭೇದಗಳೂ ಗುಂಪುಗೂಡುವುದಿಲ್ಲ. 'ಪ್ರೈಮೇಟ್'ಗಳಲ್ಲೆಲ್ಲ ಬೃಹತ್ ಸಂಖ್ಯೆಯ ಗುಂಪು ಜೀವನದಲ್ಲಿ ಮನುಷ್ಯರನ್ನು ಬಿಟ್ಟರೆ ಮ್ಯಾಂಡ್ರಿಲ್‌ಗಳದೇ ಪ್ರಥಮ ಸ್ಥಾನ!

■ ಎನ್. ವಾಸುದೇವ್